# ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ಐ.ಸಿ.ಎ.ಆರ್.-ಕೃಷಿ ವಿಜ್ಞಾನ ಕೇಂದ್ರ, ಉತ್ತರ ಕನ್ನಡ

ಬನವಾಸಿ ರಸ್ತೆ, ಶಿರಸಿ

## ಭತ್ತದ ಪ್ರಮುಖ ಕೀಟಗಳ ನಿರ್ವಹಣೆ

### ಗರಿ ಸುತ್ತುವ ಹುಳು / ಎಲೆ ಸುರುಳಿ ಹುಳು / ಬಿಳಿ ಎರಗಲು

ಮರಿ ಹುಳುಗಳು ಭತ್ತದ ಗರಿಗಳ ಎರಡು ಅಂಚನ್ನು ಮಡಚಿ ಒಳಗಡೆ ಇದ್ದು ಪತ್ರ ಹರಿತ್ತನ್ನು (ಹಸಿರು ಭಾಗ) ಕೆರೆದು ತಿನ್ನುವುದರಿಂದ ಗರಿಗಳ ಮೇಲೆ ಬಿಳಿಯ ಪಟ್ಟಿಗಳು ಕಾಣುತ್ತವೆ.



ಎಲೆಸುರಳಿ ಕೀಟ ಭಾದೆಯ ಲಕ್ಷಣಗಳು



ನೊಮುರಿಯಾ ಬಾಧೆಗೊಳಗಾದ ಎಲೆಸುರಳಿ ಕೀಟ

ನಿರ್ವಹಣೆ ಕ್ರಮಗಳು :

- ಜೈವಿಕ ಕೀಟನಾಶಕವಾದ ನೊಮೊರಿಯಾ ರಿಲೆ 1 ಗ್ರಾಂ ಅಥವಾ ಬೇವು ಆಧಾರಿತ ಕೀಟನಾಶಕವಾದ ನಿಂಬಿಸಿಡಿನ್ 3 ಮಿ. ಲೀ. ಪ್ರತಿ ಲೀಟರ್ ನೀರಿಗೆ ಅಥವಾ ಶೇ. 5 ರ ಮುಕ್ಕಡಕ ***(Gnidea glauca)*** ಸೊಪ್ಪಿನ ನೀರಿನ ಕಷಾಯವನ್ನು ಸಿಂಪಡಿಸಿ.
- 2.0 ಮಿ. ಲೀ. ಕ್ಲೋರ್‌ಪೈರಿಪಾಸ್ 20 ಇಸಿ ಅಥವಾ 2.0 ಮಿ. ಲೀ. ಪ್ರೋಫೆನೋಫಾಸ್ 50 ಇಸಿ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಸಿಂಪರಣೆಗೆ ಮುನ್ನ ಮುಳ್ಳಿನ ರೆಂಬೆಗಳಿಂದ ಭತ್ತದ ಬೆಳೆಯ ಮೇಲೆ ಹೊಡೆಯುವುದು ಈ ಹುಳುವಿನ ಹತೋಟಿಗೆ ಪರಿಣಾಮಕಾರಿಯಾಗುತ್ತದೆ.



ಕಾಂಡಕೊರಕ ಕೀಟದ ಹುಳು ಹಾಗೂ ಭಾದೆಯಿಂದಾದ ಬಿಳಿ ತೆನೆ

### ಕಾಂಡ ಕೊರೆಯುವ ಹುಳು / ಗಣ್ಣು ಹುಳು

ಮರಿಹುಳು ಕಾಂಡವನ್ನು ಕೊರೆದು ಸುಳಿ ಒಣಗುವಂತೆ ಮಾಡುತ್ತದೆ. ಇದರ ಹಾವಳಿ ತೆನೆ ಹಂತದಲ್ಲಿ ಕಂಡುಬಂದರೆ ಬಿಳಿಯ ಜೊಳ್ಳು ತೆನೆಗಳು ಉಂಟಾಗುತ್ತವೆ.

ನಿರ್ವಹಣೆ

- ಕ್ಲೋರ್‌ಪೈರಿಫಾಸ್ 20 ಇಸಿ 2.0 ಮಿ.ಲೀ. ಅಥವಾ ಮೊನೊಕ್ರೋಟೋಪಾಸ್ 36 ಎಸ್. ಎಲ್. 1.3 ಮಿ. ಲೀ. ಪ್ರತಿ ಲೀ. ನೀರಿಗೆ ಬೆರೆಸಿ ಸಿಂಪಡಿಸಬೇಕು.
- ಈ ಕೀಟದ ಬಾಧೆ ಹೆಚ್ಚಾಗಿರುವ ಪ್ರದೇಶದಲ್ಲಿ ಎಕರೆಗೆ 10 ಕಿ. ಗ್ರಾಂ. ಪಿಪ್ರೋನಿಲ್ 0.3 ಜಿ ಅಥವಾ 7.5 ಕಿ. ಗ್ರಾಂ. ಕಾರ್ಬೋಫ್ಯೂರಾನ್ 3 ಜಿ ಹರಳುಗಳನ್ನು ಬಿತ್ತನೆಗೆ ಮುಂಚೆ ಮಣ್ಣಿನಲ್ಲಿ ಬೆರೆಸಿ ನೀರು ಹಾಯಿಸಬೇಕು.

### ಕಂದು ಜಿಗಿ ಹುಳು ಮತ್ತು ಬಿಳಿ ಬೆನ್ನಿನ ಜಿಗಿ ಹುಳು

ಬಾಧೆಗೊಳಗಾದ ಗರಿಗಳು ಕಂದು ಬಣ್ಣಕ್ಕೆ ತಿರುಗಿ ಪೈರು ಸುಟ್ಟಂತೆ ಮತ್ತು ಕುಸಿದಂತೆ ಕಾಣುತ್ತದೆ. ಇದರಿಂದ ಭತ್ತದ ಕಾಳು ತುಂಬದೇ ಜೊಳ್ಳಾಗುತ್ತದೆ.

ನಿರ್ವಹಣೆ :

- ಪ್ರತಿ 20 ಸಾಲು ನಾಟಿ ಮಾಡಿದ ನಂತರ ಒಂದು ಸಾಲು ಬಿಡುವುದರಿಂದ ಗಾಳಿ, ಬೆಳಕು ಚೆನ್ನಾಗಿ ಸಿಕ್ಕು, ಕೀಟ ಭಾದೆ ಕಡಿಮೆಯಾಗುತ್ತದೆ. ಶಿಫಾರಸ್ಸಿನಂತೆ ಸಾರಜನಕ ಬಳಕೆ ಅತ್ಯಗತ್ಯ.
- ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್. 0.3 ಮಿ.ಲೀ. ಅಥವಾ ಕ್ಲೋರ್‌ಪೈರಿಫಾಸ್ 20 ಇಸಿ. 2 ಮಿ.ಲೀ. ಅಥವಾ ಥಯೋಮಿಥಾಕ್ಸಾಮ್ 25 ಡಬ್ಲ್ಯೂ.ಜಿ. 0.2 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಾಧ್ಯವಾದಷ್ಟು ಬುಡಕ್ಕೆ ಸಿಂಪಡಿಸಬೇಕು. ಪರ್ಯಾಯವಾಗಿ 7.5 ಕಿ.ಗ್ರಾಂ. ಕಾರ್ಬೋಫ್ಯೂರಾನ್ 3 ಜಿ ಹರಳುಗಳನ್ನು ಬಳಸಬಹುದು.



ಕಂದು ಹಾಗೂ ಬಿಳಿ ಬೆನ್ನಿನ ಜಿಗಿ ಹುಳುವಿನ ಭಾಧೆಗೆ ತುತ್ತಾದ ಭತ್ತದ ಗದ್ದೆ ಹಾಗೂ ಭತ್ತದ ಬುಡದ ಮೇಲಿರುವ ಜಿಗಿ ಹುಳುಗಳು



ಭತ್ತದ ತೆನೆ ತಿಗಣೆ

### ತೆನೆ ತಿಗಣೆ/ ಗಂಧಿ ತಿಗಣೆ /ಬಾಂಬು ಹುಳ

ಪ್ರೌಢ ಮತ್ತು ಅಪ್ಸರೆ ಕೀಟಗಳು ಎಳೆಯ ತೆನೆಗಳಲ್ಲಿ ಹಾಲುಗಾಳುಗಳಿಂದ ರಸ ಹೀರುವುದರಿಂದ ಹಾನಿಗೊಳಗಾದ ಕಾಳುಗಳು ಕಂದು ಬಣ್ಣಕ್ಕೆ ತಿರುಗಿ ಜೊಳ್ಳಾಗುತ್ತವೆ.

ನಿರ್ವಹಣೆ:

- ಮೆಲಾಥಿಯಾನ್ 50 ಇ.ಸಿ. 2 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಅಥವಾ ಎಕರೆಗೆ 8 ಕಿ. ಗ್ರಾಂ. ಶೇ 5 ರ ಮೆಲಾಥಿಯಾನ್ ಪುಡಿ ಎರಚಬೇಕು.

ಸೂಚನೆ: ಈ ಕೀಟದ ನಿರ್ವಹಣೆಯನ್ನು ಸಾಮೂಹಿಕವಾಗಿ ಎಲ್ಲ ರೈತರು ಕೈಗೊಳ್ಳುವುದು ಅತ್ಯವಶ್ಯಕ